# ನನ್ನಕ್ಕ ಗಾಂಧಿ ಅಲ್ಲ



ನನ್ನ ಅಕ್ಕರೆಯ ಅಕ್ಕ
ಗಾಂಧಿ ಅನುಯಾಯಿ ಅಲ್ಲ
ಗಂಡನ ಕೆಟ್ಟ ಚಾಳಿಗಳ ವಿರುದ್ಧ
ಆಕೆಯದು ನಿತ್ಯ ಸತ್ಯಾಗ್ರಹ
ಕೆಲವು ದಿನ ಮೌನ.
ಮಕ್ಕಳು ದಾರಿ ತಪ್ಪದಿರಲು ತಾನು
ಸರಿ ದಾರಿಯಲ್ಲೇ ನಡೆಯುವಳು
ಅವಳಿಡುವ ಪ್ರತಿ ಹೆಜ್ಜೆಗಳಿಗಿದೆ
ಎಚ್ಚರದ ಲೆಕ್ಕಾಚಾರ.

ಮನೆ ನಡೆಸಲು
ಕಾಲನ ರಾಟೆ ತಿರುಗಿಸಬೇಕು.
ದಿನವಿಡೀ ರಾಟೆ ತಿರುಗಿಸುತ್ತಲೇ
ಇರುವಳು ಸತತ
ಅವಳ ರಾಟೆಯಿಂದಲೇ
ಸಂಸಾರದ ನೂಲು
ಬದುಕಿನ ಬಟ್ಟೆ ನೇಯಲು
ಅವಳದೇ ಹೆಚ್ಚಿನ ಪಾಲು.

ಗಾಂಧಿ ಪರಕೀಯರ
ಓಡಿಸಲು ಉಪವಾಸ ಕೂತಂತೆ
ಗಂಡ ಮಕ್ಕಳು ಕೆಟ್ಟದಾರಿ
ಹಿಡಿದಾಗ ಉಣ್ಣದೆ ಮಲಗುತ್ತಾಳೆ;
ಒಳಗೇ ನೋಯುತ್ತಾಳೆ.
ಪಾಠದ ಗಾಂಧಿಯ ಓದಿ ಮರೆತಿರುವ,
ನಿತ್ಯದ ಬದುಕು ನಡೆಸಲು
ಪರದಾಡುವ ನನ್ನಕ್ಕ
ಯಾರ ಅನುಯಾಯಿಯೂ ಅಲ್ಲ.

**● ಆಶಾ ಎ. ಶಿವಮೊಗ್ಗ**

ಕಲೆ: ವಾಗೀಶ ಹೆಗಡೆ